ಹೊಯ್ಸಳ ಶಿಲ್ಪಕಲೆ

ತುಂಗಭದ್ರೆಯ ಕೆಳಗೆ ಸಮಕಾಲೀನರಾಗಿ ಹೊಯ್ಸಳರು ಆಳಿದರು. ಚಾಲುಕ್ಯ ಶೈಲಿಗೆ ಹೊಸ ರೂಪಕೊಟ್ಟ ಇವರು ತಮ್ಮದೇ ಆದ ಹೊಯ್ಸಳ ಶೈಲಿಯೊಂದನ್ನು ರೂಪಿಸಿದರು. ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಬಳಸಲಾದ ಕರಿಯ ಬಳಪದ ಕಲ್ಲನ್ನು ಇವರೂ ಉಪಯೋಗಿಸಿದರಾದರೂ ಅದರ ಮೃದುತ್ವದ ಪೂರ್ಣ ಉಪಯೋಗ ಪಡೆದರು. ಒಂದು ದೃಷ್ಟಿಯಲ್ಲಿ ಇವರ ದೇವಾಲಯಗಳಲ್ಲಿ ವಾಸ್ತು ಶಿಲ್ಪಕ್ಕಿಂತಲೂ ಹೆಚ್ಚಿನ ಪ್ರಾಧಾನ್ಯ ಮೂರ್ತಿಶಿಲ್ಪಕ್ಕೆ ದೊರಕಿದೆ. ನಕ್ಷತ್ರಾಕಾರದ ತಲವಿನ್ಯಾಸ ಚಾಲುಕ್ಯ ಶೈಲಿಯ ಅಂತಿಮ ಹಂತಗಳಲ್ಲಿ ಆರಂಭವಾಗಿದ್ದು ಈಗ ಅದು ಇವರ ವಾಸ್ತುಶಿಲ್ಪದ ವೈಶಿಷ್ಟ್ಯವಾಯಿತು. ಗೋಡೆಗಳ ಹಿಂಜರಿತ, ಮುಂಜರಿತಗಳಿಂದ ದೇವಾಲಯದ ಕಟ್ಟಡಗಳ ಸುಭದ್ರತೆಯನ್ನು ಹೆಚ್ಚಿಸಿದ್ದುದ್ದಲ್ಲದೆ ಒಂದೇ ಉದ್ದ ಗೋಡೆಯಿಂದ ಉಂಟಾಗುವ ಒಂದು ನೀರಸ ಮನೋಭಾವವನ್ನು ಹೋಗಲಾಡಿಸಲಾಯಿತು. ಅಧಿಷ್ಠಾನದಿಂದ ಶಿಖರಾದವರೆಗೆ ಮೇಲೇರುತ್ತಾ ಹೋಗುವ ಸರಿತಗಳಿಂದ ನಕ್ಷತ್ರದಂತೆ ಕಾಣಿಸುವ ಕಟ್ಟಡದಲ್ಲಿ ಬೆಳಕು-ನೆರಳುಗಳ ಸಮರ್ಥ ಸಂಯೋಜನೆಯನ್ನು ಮಾಡಿ ತನ್ಮೂಲಕ ವಿಗ್ರಹಗಳ ಮೇಲೂ ಕೆತ್ತನೆಯ ಕೆಲಸಗಳ ಮೇಲೂ ವಿಶೇಷ ಪರಿಣಾಮ ಉಂಟಾಗುವಂತೆ ಮಾಡಲಾಯಿತು. ಕಟ್ಟಡಗಳು ಕುಬ್ಜವಾದ ಕಾರಣ ನೆಲದಿಂದ ನಾಲ್ಕೈದು ಅಡಿಗಳ ಎತ್ತರದ ಜಗುಲಿಯನ್ನು ಕಟ್ಟಿ ಅದರ ಮೇಲೆ ದೇವಾಲಯದ ಕಟ್ಟಡವನ್ನೆಬ್ಬಿಸುವ ಸಂಪ್ರದಾಯವನ್ನು ರೂಪಿಸಲಾಯಿತು. ದೇವಾಲಯದ ಗೋಡೆಗಳ ತುಂಬಾ ಈಗ ಶಿಲ್ಪಗಳನ್ನು ಕೆತ್ತಿದುದರಿಂದ ಅವುಗಳನ್ನು ಸಾವಕಾಶವಾಗಿ ನೋಡಲು, ದೇವಾಲಯದ ಸುತ್ತಲೂ ಪ್ರದಕ್ಷಿಣೆ ಹೋಗಿಬರಲೆಂದೂ ಸಹ ಈ ಜಗುಲಿಗಳ ಆಲಯದ ಕಟ್ಟಡಗಳಿಗಿಂತ ೪-೫ ಅಡಿಗಳು ಹೆಚ್ಚು ವಿಸ್ತಾರವಾದ ಜಾಗವನ್ನು ಪಡೆದಿತ್ತು. ಹೊರಗೋಡೆಗಳ ಕೆಳಗಿನ ಅರ್ಧಭಾಗದಲ್ಲಿ ಒಂದರ ಮೇಲೊಂದರಂತೆ ಸಮತಲದ ಪಟ್ಟಿಗಳ ಸಾಲುಗಳಿದ್ದು ಅವುಗಳಲ್ಲಿ ಸೂಕ್ಷ್ಮವಾಗಿ ಕೆತ್ತಿದ ಕುದುರೆಗಳು, ವಾದ್ಯಗಳನ್ನು ನುಡಿಸಿ ನರ್ತಿಸುತ್ತಿರುವ ಸ್ತ್ರೀಪುರುಷರ ಪುಷ್ಪಲತಾ ವಿಧಾನಗಳು, ಮೃಗ-ಪಕ್ಷಿಗಳ ಸಣ್ಣ ಪ್ರಮಾಣದ ಮೂರ್ತಿಗಳನ್ನು ಕಡೆಯಲಾಗಿತ್ತು. ಈ ಅಲಂಕಾರ ಪಟ್ಟಿಗಳಲ್ಲಿ ರಾಮಾಯಣ, ಮಹಾಭಾರತ, ಭಾಗವತಗಳಲ್ಲಿನ ಕತೆಗಳನ್ನು ನಿರೂಪಣಾತ್ಮಕವಾಗಿ ಚಿತ್ರಿಸಲಾಗಿತ್ತು. ನವರಂಗ, ಮುಖಮಂಟಪಗಳಲ್ಲೂ ಶಿಲ್ಪಗಳ ಅಂಕಣಗಳು, ಸುಖನಾಸಿ, ಗರ್ಭಗೃಹಗಳ ಹೊರಗೋಡೆಗಳ ಮಧ್ಯದಲ್ಲಿ ೨-೩ ಅಡಿಗಳ ಎತ್ತರದ ದೇವಾದಿ ದೇವತೆಗಳ ಪೌರಾಣಿಕ ವೀರರ ಶಿಲ್ಪಗಳು, ಅತಿ ಸುಂದರವಾದ ಮದನಿಕೆ ವಿಗ್ರಹಗಳು, ಹೊಯ್ಸಳ ಶಿಲ್ಪಕಲೆಯ ಸರ್ವಾಂಗೀಣ ಸುಂದರ ಕೊಡುಗೆಗಳು, ಗಾಯನ, ನೃತ್ಯ, ವಾದ್ಯಗಳಲ್ಲಿ , ಬೇಟೆಗಳಲ್ಲಿ ಅಲಂಕರಣಗಳಲ್ಲಿ ನಿರತರಾದಂತೆ ಈ ಮದನಿಕೆಗಳನ್ನು ರೂಪಿಸಲಾಗಿದೆ.

ಹೊಯ್ಸಳ ದೇವಾಲಯಗಳನ್ನು ಮೂರ್ತಿಶಿಲ್ಪಗಳ ಬಯಲು ಪ್ರದರ್ಶನಾಲಯವೆಂದು ಕರೆಯಬಹುದು. ನೋಟಕರನ್ನು ಆಕರ್ಷಿಸಲು ಗೋಡೆಯಲ್ಲಿ ಲಭ್ಯವಿದ್ದಲ್ಲೆಲ್ಲಾ ಸೂಕ್ಷ್ಮ ಸಹಜ, ಮೋಹಕವಾದ ಲತೆ ಬಳ್ಳಿ, ಪುಷ್ಪ ವಿನ್ಯಾಸಗಳು, ಪ್ರಾಣಿ-ಪಕ್ಷಿ ಹಾಗೂ ಕ್ರಿಮಿ ಕೀಟಾದಿಗಳು, ಮನುಷ್ಯನ ಹಾಗೂ ದೇವತೆಗಳ ಮೂರ್ತಿಗಳು ತುಂಬಿವೆ. ಉಬ್ಬು ಚಿತ್ರಗಳಲ್ಲಿ ಕಾಣಿಸಿಕೊಳ್ಳುವ ದೇವರುಗಳು, ಗಜೇಂದ್ರ ಮೋಕ್ಷ, ಗಜಾಸುರ ಮರ್ದನ, ಕಾಳಿಯ ಮರ್ದನ, ತ್ರಿವಿಕ್ರಮ, ಶಿವ-ಪಾರ್ವತಿ, ಬ್ರಹ್ಮ ಸರಸ್ವತಿ, ಮನ್ಮಥ ರತಿ ದೃಶ್ಯಗಳ ನಿರೂಪಣೆಗಳ ವಿಗ್ರಹಗಳನ್ನು ಕಂಡಾಗ ಪ್ರೇಕ್ಷಕ ಆಶ್ಚರ್ಯಚಕಿತನಾಗುತ್ತಾನೆ. ಈ ಚಿತ್ರಸಂಪುಟದಲ್ಲಿ ಬೇಲೂರು ಮತ್ತು ಹಳೇಬೀಡಿನ ಶಿಲ್ಪಗಳನ್ನು ಮಾತ್ರ ಆಯ್ಕೆ ಮಾಡಲಾಗಿದೆ.

ಶೀರ್ಷಿಕೆಗಳು

೧) ನಾಟ್ಯ ಗಣಪತಿ ೨) ವಿಷ್ಣು ೩) ಮುಕರ ಮುಗ್ಧೆ ೪) ನೃತ್ಯಗಾರ್ತಿ ೫) ಶುಕಭಾಷಿಣಿ ೬) ಊರ್ಧ್ವ ತಾಂಡವ

೭) ಬೇಟೆಗಾರ್ತಿ ೮) ಸಂಗೀತಗಾರ್ತಿ ೯) ಗಜಾಸುರ ಮರ್ದನ ೧೦) ನಟರಾಜ

HOYSALA SCULPTURE

The latest development of temple architecture in Dravidian style in Southern Deccan is exemplified by the temples built during 12-13th Centuries when Hoysalas held sway over the region towards south of river Tungabhadra. Very unique style of temple architecture was developed during this period. Utility of soap stone, which was being used by Kalyani chalukyas in temple architecture, was exploited to the maximum during this period. In a way these temples are rich with iconographic ornamentation than that of architectural beautification. Scalloped plan, excessive designing and dexterous ornamentation and grouping of number of shrines on a raised terrace assumed special importance during this period. The stellate plan of the temple is due not only to off-setting of the sides but also of the recesses and the increase in wall space which gave scope for the additions of more sculptures and also brushed aside the monotony of having a long straight wall. The vimanas have a number of storeys each marked by superstructures allowing more light and also creating light and shade effect on icons and bassreliefs.

These temples were built on raised mouldings of terraces as they were short in height. This increased height helped spectators to observe deligently executed delicate decorations and also friezes in detail. Incidently the terrace also helped **bhaktas** to go round the temple in **pradakshina** around the temple. Outside walls of the temples have been decorated with several parallel strips wherein horses, elephants, swans, dancers, musicians, have been carved with minute details. These friezes also contain narrative sculpture from Ramayana, Mahabharata, Bhagavata. Navaranga, Mandapa, Sukanasi, Garbhagriha are decorated with pieces of sculptures. The over hanging cornices of the mandapa is supprted by a number of superbly chistled bracket figures of women (Madanikas) in a variety of graceful poses. The pillars in mandapa are lathe-turned and its ceiling is not only supported by beautiful sculptures of Madanikas but also covered with rich Carvings including an extremely ornate pendent in the centre.

Among the temples of Hoysalas temples at Halebid and Belur are typical of this last phase of temple architecture. These temples are generally called open air gallery of artistic icons. Not even an inch of space is left uncarved in temple walls and basements. Fantastic floral designs. enchanting elephants, ducks, horses, soldiers, Gods and Godesses have been carved all over the temple. Bassreliefs of Gajendra Moksha, Gajasura Mardana, Kali Mardana, Trivikrama, shiva-parvathi, Brahma, Saraswati, Rathi-Manmatha will hold onlookers spellbound.

In this portfolio we are presenting a few of those excellent creations of art selected from temples at Halebid and Belur-

1. Natya Ganapathi 2. Maha Vishnu 3. Lady with Mirror (Mukura Mugdhe)

4. Nritya Saraswathi 5. Lady with parrot 6. Urdhva Thandava (Shiva)
(Suka Bhashini)

7. Lady Hunter 8. Musician 9. Gajasura mardana 10. Nataraja



















